**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.78/2022</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿ ಃ 1 ರಾಮಚರಣ ತಂದೆ ರಾಮಕಿಶೋರ ಶರ್ಮಾ
ವಃ 48 ವರ್ಷ, ಉಃ ಡ್ರೈವರ
ಸಾಃ ಜಾಹೋತ
ತಾಃ ಅಮೇರ, ಜಿಃ ಜೈಪೂರ, ರಾಜಸ್ಥಾನ ರಾಜ್ಯ

2 ಓಂಕಾರ ತಂದೆ ದಗಡು ಗೋವಾಲೆ
ವಃ 17 ವರ್ಷ, ಉಃ ಸತ್ಯಲೋಕಾಶ್ರಮದ ಪುಸ್ತಕ ವ್ಯಾಪಾರ
ಸಾಃ ನೀಲಕಂಠವಾಡಿ , ತಾಃ ಬಸವಕಲ್ಯಾಣ
ಜಿಃ ಬೀದರ್ **(Juvenile)**

3 ವಿಜಯಶಂಕರ ಗುಪ್ತಾ ತಂದೆ ಓಂಕಾರನಾಥ ಗುಪ್ತಾ
ವಃ 32 ವರ್ಷ, ಉಃ ಪುಸ್ತಕ ವ್ಯಾಪಾರ ಹಾಗೂ ಧರ್ಮ ಪ್ರಚಾರ
ಸಾಃ ಜಮಲಪುರ ಪೋಸ್ಟ್, ಮಮದಾಬಾದ
ಜಿಃ ಗಾಜಿಪುರ (ಉತ್ತರ ಪ್ರದೇಶ)

4 ಕೃಷ್ಣರಾಮ ತಂದೆ ಲೀಕಮಾರಾಮ ಚೌಧರಿ
ವಃ 45 ವರ್ಷ, ಉಃ ಪುಸ್ತಕ ವ್ಯಾಪಾರ ಹಾಗೂ ಧರ್ಮ ಪ್ರಸಾರ
ಸಾಃ ಅರಟಿಯಾ, ತಾಃಭೂಪಾಲಗಡ್
ಜಿಃ ಜೋಧಪುರ ರಾಜ್ಯಃ ರಾಜಸ್ಥಾನ

----

**<u>ದೋಷಾರೋಪಣೆ</u>**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 03-09-2021ರಂದು ಸಾಯಂಕಾಲ 04.00 ಗಂಟೆ ಸುಮಾರಿಗೆ ಸೇಡಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಸೇಡಂ ಪಟ್ಟಣದ ಎ.ಪಿ.ಎಮ್.ಸಿ ಗಂಜ್ ಏರಿಯಾದಲ್ಲಿ ಆರೋಪಿ .1 ರಿಂದ 4 ನೇದ್ದವರು ಕೂಡಿ ಒಂದು ಬುಲೆರೊ ಪಿಕಪ್ ವಾಹನ ನಂ. ಕೆಎ.05/ಎಕೆ-3932 ನೇದ್ದರಲ್ಲಿ ಜ್ಞಾನಗಂಗಾ ಹಾಗೂ ಬದುಕುವ ದಾರಿ ಎಂಬ ಪುಸ್ತಕಗಳನ್ನು ತೆಗೆದುಕೊಂಡು ಬಂದು ವಾಹನದಲ್ಲಿರುವ ಮೈಕನ ಮುಖಾಂತರ ಸಾರ್ವಜನಿಕರಿಗೆ ಕರೆದು ಇದು ಹರಿಯಾಣ ರಾಜ್ಯದ ಸಂತ ರಾಮಪಾಲ ಮಹಾರಾಜರ ಸತ್ಯಲೋಕಾಶ್ರಮದ ಧರ್ಮಗ್ರಂಥಗಳಿದ್ದು, ನೀವು ಭಗವದ್ಗೀತೆ ಹಾಗೂ ಇತರೆ ಯಾವುದೇ ಧರ್ಮಗ್ರಂಥಗಳನ್ನು ಓದುವುದು ಬೇಕಾಗಿಲ್ಲ. ಈ ಪುಸ್ತಕಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದು, ಇದನ್ನು ಕೊಂಡು ಓದಿರಿ ನಿಮ್ಮೆಲ್ಲ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳಿರಿ ನೀವು ಎಲ್ಲ ದೇವರನ್ನು ಪೂಜಿಸುವುದು ಬೇಕಾಗಿಲ್ಲ. ರಾಮಪಾಲ ಮಹಾರಾಜರು ನಿಜವಾದ ಪರಮಾತ್ಮ ಇದ್ದು, ಇವರ ನಾಮಸ್ಮರಣೆ

ಮಾಡಿದರೆ ಸಾಕು ಅನ್ಯ ದೇವರುಗಳ ಪೂಜೆಯನ್ನು ತಿಳುವಳಿಕೆ ಇಲ್ಲದವರು ಮಾಡುತ್ತಾರೆ ಅಂತ ಸಾರ್ವಜನಿಕರಿಗೆ ಹೇಳುತ್ತಾ ಪುಸ್ತಕಗಳನ್ನು ಸಾರ್ವಜನಿಕರಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುತಿದ್ದು, ಇದನ್ನು ಕಂಡು ಚಾಸಾ.1 ಹಾಗೂ 6 ರಿಂದ 11ರವರೆಗಿನವರು ಆರೋಪಿತರಿಂದ ಜ್ಞಾನಗಂಗಾ ಹಾಗೂ ಬದುಕುವ ದಾರಿ ಎಂಬ ಪುಸ್ತಕವನ್ನು ಕೊಂಡುಕೊಂಡು ಓದಿ ಜ್ಞಾನಗಂಗಾ ಪುಸ್ತಕದಲ್ಲಿ ಪುಟ ಸಂಖ್ಯೆ 230ರಲ್ಲಿ ಅನ್ಯದೇವರುಗಳ ಪೂಜೆಯನ್ನು ತಿಳುವಳಿಕೆ ಇಲ್ಲದವರು ಮಾಡುತ್ತಾರೆ ಅಂತ ಬರೆದಿದ್ದು ಹಾಗೂ ಪುಸ್ತಕದಲ್ಲಿ ಹಿಂದೂ ಧರ್ಮದ ದೇವ ದೇವತೆಗಳ ಬಗ್ಗೆ ಹಾಗೂ ಧಾರ್ಮಿಕ ಪುರುಷರ ಬಗ್ಗೆ ಸತ್ಯವನ್ನು ತಿರುಚಿ ಜನರಲ್ಲಿ ಅಪನಂಬಿಕೆ ಬರುವಂತೆ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ಬರುವಂತ ಅವಹೇಳನಕಾರಿಯಾದ ಅಂಶವುಳ್ಳ ಸಾಹಿತ್ಯಗಳನ್ನು (ಪುಸ್ತಕಗಳನ್ನು) ಸೇಡಂ ತಾಲ್ಲೂಕಿನಾದ್ಯಂತ ಮಾರಾಟ ಮಾಡಿ ಹಿಂದೂ ಧರ್ಮದ ಶ್ರದ್ದೆ ಹಾಗೂ ಧಾರ್ಮಿಕ ಭಾವನೆಗೆ ಧಕ್ಕೆವುಂಟು ಮಾಡಿದ್ದು ಇರುತ್ತದೆ, ಕಾರಣ ನೀವು ಭಾ. ದಂ. ಸಂಹಿತೆ ಕಲಂ 295(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕ: 10-07-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.78/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿ ನಂ.1ಃ ರಾಮಚರಣ ತಂದೆ ರಾಮಕಿಶೋರ ಶರ್ಮಾ
ವಃ 48 ವರ್ಷ, ಉಃ ಡ್ರೈವರ
ಸಾಃ ಜಾಹೋತ
ತಾಃ ಅಮೇರ, ಜಿಃ ಜೈಪೂರ, ರಾಜಸ್ಥಾನ ರಾಜ್ಯ ಹಾಗೂ ಇತರರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-3

ಆ-4

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-3

ಆ-4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 10-07-2025 ಪ್ರ.ದ.ನ್ಯಾ.ದಂ. ಸೇಡಂ.